**ಪಿಡಬ್ಲ್ಯೂ-1**

ದಿನಾಂಕಃ **24-03-2026** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಶ್ರೀ ಹೆಚ್.ಎಸ್.ಕೆ. ವಕೀಲರಿಂದಃ-

ನಾನು 26 ವರ್ಷಗಳಿಂದ ಅರಸೀಕೆರೆಯ ಎ.ಪಿ.ಎಂ.ಸಿ. ಯಾರ್ಡ್ ನಲ್ಲಿ ವ್ಯಾಪಾರ ಮಾಡುತ್ತಿದ್ದೇನೆ. ಎ.ಪಿ.ಎಂ.ಸಿ. ಯಿಂದ ಪರವಾನಗೆಯನ್ನು ಪಡೆದಿರುತ್ತೇನೆ. ಅದನ್ನು ಹಾಜರುಪಡಿಸಿರುತ್ತೇನೆ. ನಾನು ಕಮೀಷನ್ ಏಜೆಂಟ್ ಆಗಿ ಕೆಲಸ ಮಾಡುತ್ತೇನೆ. ಕೃಷಿ ಉತ್ಪನ್ನಗಳನ್ನು ನಾವು ಟೆಂಡರ್ ಗೆ ಹಾಕುತ್ತೇವೆ ನಂತರ ಖರೀದಿದಾರರು ಅದನ್ನು ಖರೀದಿಸುತ್ತಾರೆ. ಆ ಬಗ್ಗೆ ಕೃಷಿ ಉತ್ಪನ್ನಗಳನ್ನು ಟೆಂಡರ್ ಗೆ ಬಿಟ್ಟ ಬಗ್ಗೆ ದಾಖಲೆಗಳು ಇವೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಟೆಂಡರ್ ನಲ್ಲಿ ಹೆಚ್ಚಿನ ಬಿಡ್ ಮಾಡಿದವರ ಹೆಸರನ್ನು ಘೋಷಿಸುತ್ತಾರೆಂದರೆ ಸರಿ. ಟೆಂಡರ್ ಆದ ನಂತರ ಖರೀದಿದಾರರ ನೌಕರರು ಬಂದು ಆ ಬೆಳೆಯನ್ನು ಪರಿಶೀಲಿಸಿ ತೂಕ ಮಾಡಿ ತೆಗೆದುಕೊಂಡು ಹೋಗುತ್ತಾರೆಂದರೆ ಸರಿ. ಟೆಂಡರ್ ಆದ ಮೇಲೆ ಖರೀದಿದಾರರು ಅಥವಾ ಅವರ ಪರ ಏಜೆಂಟರು ಸಹಿ ಮಾಡಿ ಉತ್ಪನ್ನಗಳನ್ನು ತಮ್ಮ ವಶಕ್ಕೆ ಪಡೆಯುತ್ತಾರೆಂದರೆ ಸರಿ. ಈ ರೀತಿ ಟೆಂಡರ್ ಪ್ರಕ್ರಿಯೆ ಆದಾಗ ಮಾತ್ರ ಕಮೀಷನ್ ಏಜೆಂಟ್ ಮತ್ತು ಕೃಷಿ ಉತ್ಪನ್ನದಾರರ ಮಧ್ಯೆ ವ್ಯವಹಾರ ನಡೆದಿದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ಅರಸೀಕೆರೆ ಮಾರುಕಟ್ಟೆಯಲ್ಲಿ ಆನ್ ಲೈನ್ ಟೆಂಡರ್ ಪ್ರಕ್ರಿಯೆ ಆಗಿ ಸುಮಾರು 12 ವರ್ಷಗಳು ಆಗಿವೆ. ಪ್ರತಿವಾದಿಯ ಟೆಂಡರ್ ಹಾಕಿದ ಬಗ್ಗೆ ಆನ್ ಲೈನ್ ನಲ್ಲಿ ಮಾಹಿತಿ ಸಿಗುತ್ತದೆ. ನಿಪಿ-4 ಸೆಸ್ ಕಟ್ಟಿದ ಬಗ್ಗೆ ದಾಖಲೆ ಇರುತ್ತದೆ. ನಿಪಿ-3 ರ BILL No. 591 ರಲ್ಲಿರುವ ಸಹಿ ಪ್ರತಿವಾದಿಯ ಪ್ರತಿನಿಧಿ ರುದ್ರೇಶ್ ರವರದ್ದಾಗಿರುತ್ತದೆ. BILL No. 592 ರಲ್ಲಿರುವ ಸಹಿ ಯಾರದ್ದು ಎಂದು ಗೊತ್ತಾಗುವುದಿಲ್ಲ. BILL No. 593 ರಲ್ಲಿ ಯಾರ ಸಹಿ ಇಲ್ಲ ಎಂದು ಹೇಳುತ್ತಾರೆ. ನಿಪಿ-3 ರ ಬಿಲ್ ಪುಸ್ತಕವನ್ನು ಟ್ರೇಡರ್ಸ್ ಗೆ ರೆಫರೆನ್ಸ್ ಗಾಗಿ ಬೇಕಾಗಿರುವುದರಿಂದ ಬರೆದಿರುತ್ತೇವೆ. BILL No. 594 ರಲ್ಲಿ ಕಾರ್ಬನ್ ಮೇಲೆ ಬರೆದಿದ್ದು ಸೈಡ್ ನಲ್ಲಿ ಪೆನ್ ನಲ್ಲಿ ಬರೆಯಲಾಗಿದೆ. BILL No. 595 ರಲ್ಲಿರುವ ಸಹಿ ಯಾರದ್ದು ಎಂದು ಗೊತ್ತಿಲ್ಲ. BILL No. 598, 599, 600 ರಲ್ಲಿ ಸಹಿಗಳು

ಇಲ್ಲ ಎಂದರೆ ಸರಿ. ಪ್ರತಿವಾದಿಯ ಟ್ರೇಡರ್ಸ್ ನರವದ್ದು ನಿಪಿ-3 ರಲ್ಲಿ ಯಾರ ಸಹಿ ಇಲ್ಲ ಎಂದರೆ ಸರಿ. ಅವರ ಪ್ರತಿನಿಧಿಗಳು ಬಂದು ಸಹಿ ಮಾಡುತ್ತಾರೆ. ಪ್ರತಿವಾದಿ ಅಧಿಕೃತವಾಗಿ ಆ ರೀತಿ ಟೆಂಡರ್ ನಲ್ಲಿ ಭಾಗವಹಿಸಲು ಯಾರಿಗೆ ಪರವಾನಗೆ ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಆನ್ ಲೈನ್ ಮೂಲಕ ಟೆಂಡರ್ ಹಾಕಿದ್ದರೆ ಎ.ಪಿ.ಎಂ.ಸಿ. ನಲ್ಲಿ ಆ ಬಗ್ಗೆ ದಾಖಲೆ ಸಿಗುತ್ತದೆ ಎಂದರೆ ಸರಿ. ಆ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಹಾಜರುಪಡಿಸಿರುವ ಬಿಲ್ ಪುಸ್ತಕಕ್ಕೂ ಪ್ರತಿವಾದಿ ಸಂಸ್ಥೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ಹಣ ಪಡೆಯುವ ಉದ್ದೇಶದಿಂದ ಬಿಲ್ ಪುಸ್ತಕಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಆನ್ ಲೈನ್ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **24-03-2026.**